ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಮಾತಂವಿ/42/ಸೇವಾಸಿಂಧು/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ: 25.05.2019

## ಸುತ್ತೋಲೆ

ಕಾಲೇಜು ಶಿಕ್ಷಣ ಇಲಾಖೆಯು ರಾಜ್ಯ ಸರ್ಕಾರ ರೂಪಿಸಿರುವ "ಸೇವಾ ಸಿಂಧು" ಯೋಜನೆಯಡಿ 06 ಸೇವೆಗಳನ್ನು ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳಿಗೆ ನಗದು ರಹಿತ ಮತ್ತು ಕಾಗದ ರಹಿತ ವಿಧಾನದಲ್ಲಿ ತಲುಪಿಸುತ್ತಿದೆ. ಸದರಿ ಯೋಜನೆ ವಿದ್ಯಾರ್ಥಿಗಳು ಸರ್ಕಾರಿ ಕಛೇರಿಗಳಿಗೆ ಅಲೆದಾಡುವ ಸಮಯವನ್ನು ಕಡಿಮೆ ಮಾಡಲು ಮತ್ತು ಸೇವಾ ಸ್ವೀಕೃತಿ ಪ್ರಕ್ರಿಯೆಯನ್ನು ಸರಳೀಕರಿಸಲು ಸಹಕಾರಿಯಾಗಿದೆ. ಈ ಯೋಜನೆಯ ಯಶಸ್ಸಿಗೆ ಪೂರಕವಾಗಿ ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಯೋಜನೆಯ ಕುರಿತು ಅರಿವು ಮೂಡಿಸುವ ಕಾರ್ಯ ಅತ್ಯಂತ ತುರ್ತಾಗಿ ಆಗಬೇಕಿದೆ.

ಈ ಹಿನ್ನೆಲೆಯಲ್ಲಿ "ಸೇವಾ ಸಿಂಧು" ಯೋಜನೆಗೆ ವ್ಯಾಪಕ ಪ್ರಚಾರ ನೀಡಲು, ಕಾಲೇಜಿನ ಪ್ರಾಂಗಣದಲ್ಲಿ 'ಸೇವಾ ಸಿಂಧು ನೋಟಿಸ್ ಬೋರ್ಡ್' ಅನ್ನು ಸ್ಥಾಪಿಸಿ, ಈ ಪತ್ರದೊಂದಿಗೆ ಲಗತ್ತಿಸಿರುವ ಮಾದರಿ ಪೋಸ್ಟರ್ ಅನ್ನು ದೊಡ್ಡ ಅಳತೆಯಲ್ಲಿ ಮುದ್ರಿಸಿ, ಮುದ್ರಿತ ಪ್ರತಿಯನ್ನು ಪ್ರದರ್ಶಿಸಲು ಸೂಚಿಸಲಾಗಿದೆ.

25/5/19
ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಗಳು:

1. ರಾಜ್ಯದ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಜಂಟಿ ನಿರ್ದೇಶಕರ ಕಛೇರಿ,ಕಾಲೇಜು ಶಿಕ್ಷಣ ಇಲಾಖೆ - ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಅಯುಕ್ತರ ಕಛೇರಿ, ಬೆಂಗಳೂರು- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

Scanned by CamScanner

## ಸೇವಾ ಸಿಂಧು

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

# ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಕಾಲೇಜಿನ ಹೆಸರು & ವಿಳಾಸ

## 6 ನಾಗರಿಕ ಆನ್‌ಲೈನ್ ಸೇವೆಗಳು

| ಕ್ರ.ಸಂ | ಸೇವೆಯ ಹೆಸರು | ವಿತರಣಾ ಸಮಯ | ಸಹಿ ಮಾಡುವ ಅಧಿಕಾರಿಗಳು |
|---|---|---|---|
| 1 | ಪ್ರವೇಶಾತಿ ವಿವರ ಕೋರಿಕೆ | 5 ದಿನಗಳು | ಪ್ರಾಂಶುಪಾಲರು |
| 2 | ಗ್ರಂಥಪಾಲಕರಿಂದ ಯಾವುದೇ ಬಾಕಿ ಇರುವುದಿಲ್ಲವೆಂದು ತೀರುವಳಿ ಪ್ರಮಾಣಪತ್ರ ಪಡೆಯಲು ಅರ್ಜಿ | 5 ದಿನಗಳು | ಪ್ರಾಂಶುಪಾಲರು |
| 3 | ಕಛೇರಿಯಿಂದ ಯಾವುದೇ ಬಾಕಿ ಇರುವುದಿಲ್ಲವೆಂದು ಬೇಬಾಕಿ ಪ್ರಮಾಣಪತ್ರ ಪಡೆಯಲು ಅರ್ಜಿ | 5 ದಿನಗಳು | ಪ್ರಾಂಶುಪಾಲರು |
| 4 | ತಾತ್ಕಾಲಿಕ ಪದವಿ ಪ್ರಮಾಣಪತ್ರವನ್ನು ಪಡೆಯಲು ಅನುಮೋದನೆಗೆ ಅರ್ಜಿ | 7 ದಿನಗಳು | ಪ್ರಾಂಶುಪಾಲರು |
| 5 | ವ್ಯಾಸಂಗ ಪ್ರಮಾಣಪತ್ರ ಪಡೆಯಲು ಅರ್ಜಿ | 5 ದಿನಗಳು | ಪ್ರಾಂಶುಪಾಲರು |
| 6 | ವರ್ಗಾವಣೆ ಪ್ರಮಾಣಪತ್ರ ರವಾನೆ | 7 ದಿನಗಳು | ಪ್ರಾಂಶುಪಾಲರು |

**ಮೇಲಿನ ಸೇವೆಗಳಿಗಾಗಿ ಭೇಟಿನೀಡಿ:** https://sevasindhu.karnataka.gov.in